**ಪಾಠ–5** **ಜುಲೈ 24–30**

# ನನ್ನ ಬಳಿಗೆ ಬನ್ನಿರಿ



**ಸಬ್ಬತ್ತಿನ ಮಧ್ಯಾಹ್ನ : ಈ ವಾರದ ಅಧ್ಯಯನಕ್ಕಾಗಿ ಓದಿರಿ :** ಮತ್ತಾಯ 11:20–30, ಮತ್ತಾಯ 5:5; ಧ.ಕಾಂಡ 18:15, ಗಲಾತ್ಯ 5:1, ವಿ.ಕಾಂಡ 18:13–22, ಗಲಾತ್ಯ 6:2.

**ಸ್ಮರಣ ವಾಕ್ಯ : "ಎಲೈ ಕಷ್ಟಪಡುವವರೇ, ಹೊರೆಹೊತ್ತವರೇ, ನೀವೆಲ್ಲರೂ ನನ್ನ ಬಳಿಗೆ ಬನ್ನಿರಿ; ನಾನು ನಿಮಗೆ ವಿಶ್ರಾಂತಿ ಕೊಡುವೆನು"** (ಮತ್ತಾಯ 11:28).

ಎಲೈ ಕಷ್ಟಪಡುವವರೇ, ಹೊರೆ ಹೊತ್ತವರೇ, ನೀವೆಲ್ಲರೂ ನನ್ನ ಬಳಿಗೆ ಬನ್ನಿರಿ; ನಾನು ನಿಮಗೆ ವಿಶ್ರಾಂತಿ ಕೊಡುವೆನು. ಎಂತಹ ಅದ್ಭುತವಾದ ವಾಗ್ದಾನವನ್ನು ಯೇಸುಕ್ರಿಸ್ತನು ನಮಗೆ ಕೊಟ್ಟಿದ್ದಾನೆ. ಸಮಯದಲ್ಲಿ ನಮ್ಮಲ್ಲಿ ಯಾರಿಗೆ ತಾನೇ ಹೊರೆ ಹೊತ್ತಂತೆ ಅನಿಸುವುದಿಲ್ಲ. ಅದು ನಾವು ಮಾಡುವ ತುಂಬಾ ಕೆಲಸಗಳಿಂದ ಆಗಬಹುದು ಆದರೆ ನಮ್ಮ ಜೀವಿತವೇ ಹೊರೆ ಹೊತ್ತಂತೆ ಆಗಿ ಬಿಟ್ಟಿರುತ್ತದೆ ಅಲ್ಲವೇ? ನಾವು ಎಂಥ ಪರಿಸ್ಥಿತಿಯಲ್ಲಿ ಇದ್ದೇವೆ ಎಂಬುದು ಯೇಸುವಿಗೆ ಗೊತ್ತು. ಆತನು ನಮಗೆ ಸಹಾಯ ಮಾಡಬಲ್ಲನು– ನಾವು ಅವನಿಗೆ ಅವಕಾಶ ಕೊಟ್ಟರೆ ಮಾತ್ರ. ನನ್ನ ನೊಗವನ್ನು ನಿಮ್ಮ ಮೇಲೆ ತೆಗೆದುಕೊಂಡು ನನ್ನಲ್ಲಿ ಕಲಿತುಕೊಳ್ಳಿರಿ ಎಂದು ಹೇಳಿದ ಮೇಲೆ ನನ್ನ ನೊಗವು ಮೃದುವಾದದ್ದು, ನನ್ನ ಹೊರೆಯು ಹೌರವಾದದ್ದು ಎಂದು ಹೇಳುತ್ತಾನೆ (ಮತ್ತಾಯ 11:30). ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ನೀವು ಹೊರುತ್ತಿರುವ ನೊಗಗಳನ್ನು ಹೊರೆಗಳನ್ನು

*** ಈ ವಾರದ ಪಾಠವನ್ನು ಜುಲೈ 31ರ ಸಬ್ಬತ್ತಿಗಾಗಿ ಅಧ್ಯಯನ ಮಾಡಿ ಸಿದ್ಧಪಡಿಸಿಕೊಳ್ಳಿರಿ.**

ತೆಗೆದುಹಾಕಿರಿ (ಅವುಗಳನ್ನು ನನಗೆ ಕೊಡಿರಿ) ಅದರ ಬದಲು ನನ್ನ ನೊಗವನ್ನು ನೀವು ತೆಗೆದುಕೊಳ್ಳಿ ಯಾಕೆಂದರೆ ಅದು ಹೊರುವುದಕ್ಕೆ ಸುಲಭವಾದದ್ದು.

ಇಲ್ಲಿ ಯೇಸುಕ್ರಿಸ್ತನು ಹೇಳುತ್ತಿರುವಂತಹ ವಿಶ್ರಾಂತಿಯನ್ನು ನಾವು ಹೇಗೆ ಅನುಭವಿಸಬಹುದು? ನಾವು ಈವಾಗ ಜೀವಿಸುತ್ತಿರುವ ಲೋಕವು ಪಾಪದಲ್ಲಿ ಬಿದ್ದ ಲೋಕವಾಗಿದೆ. ದೇವರು ಆದಾಮನಿಗೆ– ನೀನು ತಿರುಗಿ ಮಣ್ಣಿಗೆ ಸೇರುವ ತನಕ ಬೆವರಿಡುತ್ತಾ ಬೇಕಾದ ಆಹಾರವನ್ನು ಸಂಪಾದಿಸಬೇಕು ಎಂದು ಹೇಳುತ್ತಾನೆ (ಆದಿಕಾಂಡ 3:19). ಹಾಗಾಗಿ ದುಡುಯುವುದೆಂದರೇನು ಮತ್ತು ಹೊರಲಾಗದೆಂದು ಕಾಣುವ ಹೊರೆಗಳನ್ನು ನಮ್ಮಷ್ಟಕ್ಕೆ ಹೊರುವುದೆಂದರೇನು ಎಂಬುದು ನಮಗೆ ಗೊತ್ತಾಗಿದೆ.

**ಭಾನುವಾರ** **ಜುಲೈ 25**

## ನಾನು ನಿಮಗೆ ವಿಶ್ರಾಂತಿಯನ್ನು ಕೊಡುವೆನು

ಮತ್ತಾಯ 11:20–28ನ್ನು ಓದಿರಿ. ಇಲ್ಲಿ ಯೇಸುಕ್ರಿಸ್ತನು ಎಲೈ ಕಷ್ಟಪಡುವವರೇ ಹೊರೆಹೊತ್ತವರೇ ನೀವೆಲ್ಲರೂ ನನ್ನ ಬಳಿಗೆ ಬನ್ನಿರಿ ನಾನು ನಿಮಗೆ ವಿಶ್ರಾಂತಿಯನ್ನು ಕೊಡುವೆನು ಎಂದು ಹೇಳುತ್ತಾನೆ. ಈ ಹೇಳಿಕೆಯ ಸಂದರ್ಭವೇನು ಯೇಸುಕ್ರಿಸ್ತನು ಹೇಗೆ ನಮಗೆ ವಿಶ್ರಾಂತಿಯನ್ನು ಕೊಡುತ್ತಾನೆ?

ನಮ್ಮ ಹಾಗೆ ಯೇಸುಕ್ರಿಸ್ತನು ಸಂದರ್ಭವಿಲ್ಲದೆ ಮಾತಾಡುವುದೇ ಇಲ್ಲ. ಆತನನ್ನು ಅರ್ಥಮಾಡಿಕೊಳ್ಳಲು ಆವಾಗ ಸುತ್ತಮುತ್ತಲು ಇರುವ ನಿರ್ದಿಷ್ಟ ಸಂದರ್ಭವನ್ನು ನಾವು ಗ್ರಹಿಸಿಕೊಳ್ಳುವ ಅಗತ್ಯವಿದೆ ವಿಶೇಷವಾಗಿ ನಾವು ಯೇಸುಕ್ರಿಸ್ತನನ್ನು ಅಪಾರ್ಥ ಮಾಡಿಕೊಳ್ಳುವುದನ್ನು ತಪ್ಪಿಸಬೇಕು. ಮತ್ತಾಯನ ಸುವಾರ್ತೆಯಲ್ಲಿ 11ನೇ ಅಧ್ಯಾಯವು ಮತ್ತೊಂದು ಕಡೆಗೆ ತಿರುಗಿಕೊಳ್ಳುವ ಸ್ಥಳವಾಗಿದೆ. ಗಲಿಲಾಯ ಸೀಮೆಯ ಮುಖ್ಯ ಪಟ್ಟಣಗಳಲ್ಲಿ ಬಹಿರಂಗವಾಗಿ ಮಾಡಿದ ಖಂಡನೆಗಳು ಬಹಳ ಹರಿತವಾದವು–ಗಳಾಗಿದ್ದವು. ಯೇಸುಕ್ರಿಸ್ತನು ನಮ್ಮ ಮನದಿಚ್ಛೆಗೆ ಹೊಂದುವಂತೆ ಮಾತಾಡುತ್ತಿರಲಿಲ್ಲ; ಎಲ್ಲಿ ನೋಯುತ್ತದೋ ಅಲ್ಲಿಗೆ ತನ್ನ ಬೆರಳುಗಳನ್ನು ಹಾಕುತ್ತಿದ್ದನು; ಆತನು ತಪ್ಪಾದ ಜನರೊಂದಿಗೆ ಬೆರೆಯುತ್ತಿದ್ದನು (ಮತ್ತಾಯ 9:9–13). ಆತನು ತನಗೆ ಪಾಪಗಳನ್ನು ಕ್ಷಮಿಸುವ ಅಧಿಕಾರವಿದೆ ಎಂದು ಹೇಳುತ್ತಿದ್ದ ಮಾತುಗಳು ಧಾರ್ಮಿಕ ನಾಯಕರ ದೃಷ್ಟಿಯಲ್ಲಿ ಆಘಾತವನ್ನುಂಟು ಮಾಡುತ್ತಿತ್ತು (ಮತ್ತಾಯ 9:1–8).

ಯೇಸುಕ್ರಿಸ್ತನು ಕೆಲವು ಬಲಯುತವಾದ ಖಂಡನೆಯ ಮಾತುಗಳನ್ನು ಜನರಿಗೆ ಆಡುತ್ತಿದ್ದನು. ಅವರಿಗೆ ಇಷ್ಟವಾಗದ ರೀತಿಯಲ್ಲಿ ಸೋದೋಮಿಗೆ ಹೋಲಿಸುತ್ತಿದ್ದನು. ಆವಾಗ ಸೋದೋಮ್ ಎಂದರೆ ಅತಿದುಷ್ಟತನದ ಸ್ಥಳಕ್ಕೆ ಹೆಸರಾಗಿತ್ತು. "ನ್ಯಾಯ ವಿಚಾರಣೆಯ ದಿನದಲ್ಲಿ ನಿನ್ನ ಗತಿಗಿಂತಲೂ ಸೊದೋಮ್ ಸೀಮೆಯ ಗತಿಯು ಮೇಲಾಗಿರುವುದು" ಎಂದು ಹೇಳುತ್ತಾನೆ (ಮತ್ತಾಯ 11:24).

ಒತ್ತಡದ ಪರಿಸ್ಥಿತಿ ಏರುತ್ತಾ ಹೋಗುತ್ತದೆ ಆದಾಗ್ಯೂ, ಇದೆಲ್ಲದರ ಮಧ್ಯೆ ಯೇಸುಕ್ರಿಸ್ತನು ವಿಷಯವನ್ನು ಬದಲಿಸಿ ಜನರಿಗೆ ವಿಶ್ರಾಂತಿಯನ್ನು ಕೋರುತ್ತಾನೆ. ಆತನು ಇದನ್ನು ಮಾಡಬಲ್ಲನು ಯಾಕೆಂದರೆ "ನನ್ನ ತಂದೆಯು ಎಲ್ಲವನ್ನೂ ನನಗೆ ಒಪ್ಪಿಸಿದ್ದಾನೆ. ತಂದೆಯೇ ಹೊರತು ಇನ್ನಾವನೂ ಮಗನನ್ನು ತಿಳಿದವನಲ್ಲ" (ಮತ್ತಾಯ 11:27). ಯೇಸುಕ್ರಿಸ್ತನು ತನ್ನ ದೈವೀಕತೆ ಮತ್ತು ತನ್ನ ತಂದೆ ಜೊತೆಗಿದ್ದ ಐಕ್ಯತೆಯ ಆಧಾರದ ಮೇಲೆ ನಮಗೆ ವಿಶ್ರಾಂತಿಯನ್ನು ಕೊಡಲು ಶಕ್ತನಾಗಿದ್ದಾನೆ.

ನಾವು ನಮ್ಮ ಹೊರೆಗಳನ್ನು ನಮ್ಮಿಂದ ಇಳಿಸಿಕೊಳ್ಳುವ ಮೊದಲು ಅವುಗಳನ್ನು ನಾವು ಒಬ್ಬರೇ ಹೊರೆಲಾರೆವು ಎಂಬುದನ್ನು ಅರ್ಥಮಾಡಿಕೊಳ್ಳಬೇಕು. ಹೇಳಬೇಕೆಂದರೆ ನಮ್ಮ ನಿಜವಾದ ಪರಿಸ್ಥಿತಿ ನಾವು ಮನಗಾಣದೆ ಹೋದರೆ ವಿಶ್ರಾಂತಿ ಪಡೆಯುವುದಕ್ಕೋಸ್ಕರ ಬರಲಾರದೆ ಹೋಗುತ್ತೇವೆ. ಆದುದರಿಂದ ಯೇಸುಕ್ರಿಸ್ತನು ಕೊಡುವ ಆಹ್ವಾನವು ಅಗತ್ಯವಾಗಿದೆ.

ಮತ್ತಾಯ 11:28ರಲ್ಲಿರುವ ಆತನ ಹೇಳಿಕೆಯು ಗ್ರೀಕ್ ಭಾಷೆಯಲ್ಲಿ ಆಜ್ಞಾಪಕವಾಗಿದ್ದು 'ಬನ್ನಿರಿ' ಎನ್ನುವುದು ಐಚ್ಛಿಕ ವಿಷಯವಲ್ಲ (ನಮ್ಮ ಇಷ್ಟಕ್ಕೆ ಒಳಪಡುವುದಿಲ್ಲ); 'ಬನ್ನಿರಿ' ಎನ್ನುವುದು ವಿಶ್ರಾಂತಿ ಹೊಂದುವುದಕ್ಕೆ ಪೂರ್ವ ನಿಬಂಧನೆ ಆಗಿದೆ. 'ಬನ್ನಿರಿ' ಎಂದರೆ ನಾವು ಸಂಪೂರ್ಣವಾಗಿ ನಮ್ಮ ನಿಯಂತ್ರಣವನ್ನು ಒಪ್ಪಿಸಿಕೊಡಬೇಕು. ಅನೇಕ ಸಂದರ್ಭಗಳಲ್ಲಿ ನಾವು ಅನೇಕ ವಿಷಯವನ್ನು ಸೌಕರ್ಯಪೂರ್ವಕವಾಗಿ ನಮ್ಮ ಜೀವನದಲ್ಲಿ ನಮ್ಮ ಸ್ಮಾರ್ಟ್‌ಫೋನ್‌ಗಳಿಂದ ನಿಯಂತ್ರಿಸುತ್ತೇವೆ. ಯೇಸುಕ್ರಿಸ್ತನ ಹತ್ರಕ್ಕೆ ನಾವು ಸಹಜವಾಗಿ ಬರುವುದಿಲ್ಲ. ಹೇಳಬೇಕೆಂದರೆ ಹೆಚ್ಚಿನ ಜನರಿಗೆ ತಮ್ಮನ್ನು ಒಪ್ಪಿಸಿಕೊಡುವುದೆಂದರೆ ಕ್ರೈಸ್ತೀಯ ಜೀವಿತದಲ್ಲಿ ಬಹಳ ಕಠಿಣವಾದ ಭಾಗವಾಗಿದೆ.

ದೇವರು ಯೇಸುಕ್ರಿಸ್ತನ ಮೂಲಕ ಏನೆಲ್ಲಾ ಮಾಡಿದ್ದಾನೆಂಬುದನ್ನು ಮಾತಾಡಲು ಇಷ್ಟಪಡುತ್ತೇವೆ. ಅದು ಸರಿ ಕೂಡ ಆದರೆ ಅಂತಿಮದಲ್ಲಿ ನಾವು ಇನ್ನು ಯೇಸುಕ್ರಿಸ್ತನ ಹತ್ತಿರ ಬರುವುದಕ್ಕೆ ಪ್ರಜ್ಞಾಪೂರ್ವಕ ಆಯ್ಕೆಯನ್ನು ಮಾಡಬೇಕು. ಹಾಗೆಂದರೆ ನಾವು ಅವನಿಗೆ ಒಪ್ಪಿಸಿಕೊಡಬೇಕು (ಶರಣಾಗಬೇಕು). ಇಲ್ಲಿ ತಾನೆ ನಮ್ಮ ಆಯ್ಕೆಯ ಸ್ವಾತಂತ್ರ್ಯದ ವಾಸ್ತವೀಕತೆ ಮುಂದೆ ನಿಲ್ಲುತ್ತದೆ ಮತ್ತು ಕ್ರೈಸ್ತೀಯ ಜೀವಿತದ ಕೇಂದ್ರ ಭಾಗವಾಗುತ್ತದೆ.

ಯಾವ ಹೊರೆಗಳನ್ನು ನೀವು ಹೊತ್ತುಕೊಡು ಹೋಗುತ್ತಿದ್ದೀರಿ? ಅವುಗಳನ್ನು ಯೇಸುಕ್ರಿಸ್ತನಿಗೆ ಹೇಗೆ ಕೊಡುವಿರಿ ಮತ್ತು ದೊಡ್ಡ ಬೆಲೆಯನ್ನು ತೆತ್ತು ನಮಗೆ ಕೊಡಮಾಡಿರುವ ಆತನ ವಿಶ್ರಾಂತಿಯನ್ನು ಹೇಗೆ ಅನುಭವಿಸುತ್ತೇವೆ?

**ಸೋಮವಾರ** **ಜುಲೈ 26**

## ನನ್ನ ನೊಗವನ್ನು ನಿಮ್ಮ ಮೇಲೆ ತೆಗೆದುಕೊಳ್ಳಿರಿ

ಮತ್ತಾಯ 11:29,30 ವಚನಗಳನ್ನು ಓದಿರಿ. ಯೇಸುಕ್ರಿಸ್ತನು ನಮಗೆ ತನ್ನ ವಿಶ್ರಾಂತಿಯ ವಾಗ್ದಾನ ನೀಡಿದ ಕೂಡಲೇ ತನ್ನ ನೊಗವನ್ನು ಎತ್ತಿಕೊಳ್ಳಿರಿ ಎಂದು ಆಜ್ಞಾಪಿಸುತ್ತಾನೆ ಏಕೆ?

ಮೊದಲ ಆಜ್ಞಾಪನೆಯ ಪದ 'ಬನ್ನಿರಿ' (ಮತ್ತಾಯ 11:28) ಎಂಬುದರ ಜೊತೆಗೆ ಮತ್ತಾಯ 11:29ರಲ್ಲಿ ಮತ್ತೆರಡು ಪದಗಳಾದ 'ತೆಗೆದುಕೊಳ್ಳಿರಿ' ಮತ್ತು 'ಕಲಿತುಕೊಳ್ಳಿರಿ' ಎಂಬುವು ಯೇಸುಕ್ರಿಸ್ತನ ಜೊತೆಗಿದ್ದ ಜನರ ಗಮನಕ್ಕೆ ಬರುತ್ತವೆ. ನಾವು ಆತನ ನೊಗವನ್ನು ತೆಗೆದುಕೊಂಡು ಆತನಲ್ಲಿ ಕಲಿತುಕೊಳ್ಳಬೇಕಾಗಿದೆ.

ತಂದೆ ಮತ್ತು ಮಗನ ಮಧ್ಯೆ ಇರುವ ದೈವೀಕ ನಿಕಟ ಸಂಬಂಧವು (ಈಗಾಗಲೇ ಮತ್ತಾಯ 11:25–27ರಲ್ಲಿ ಇರುವಂತೆ) ನೊಗದ ರೂಪಕವನ್ನು ವಿವರಿಸುವ ಬಲಯುತವಾದ ನಿದರ್ಶನವಾಗಿ ಕೊಡಲ್ಪಟ್ಟಿದೆ. ತಂದೆ ಮತ್ತು ಮಗ ಇಬ್ಬರು ಒಂದಾಗಿ ಮಾನವಕುಲವನ್ನು ರಕ್ಷಿಸಲು ಕೆಲಸ ಮಾಡುತ್ತಿದ್ದಾರೆ. ನೊಗವು ವಿಧೇಯತ್ವಕ್ಕೆ ಸಂಕೇತವಾಗಿದೆ (ಯೆರೆಮೀಯ 27ನೇ ಅಧ್ಯಾಯವನ್ನು ನೋಡಿರಿ). ಇದು ಒಂದಾದ ಉದ್ದೇಶಕ್ಕೂ ರೂಪಕವಾಗಿದೆ. ನಾವು ಆತನ ನೊಗಕ್ಕೆ ಒಳಪಟ್ಟು ನಮ್ಮ ಸುತ್ತವಿರುವ ಇತರರನ್ನು ಆಶೀರ್ವದಿಸುವ ಕೆಲಸವನ್ನು ಅಂಗೀಕರಿಸುತ್ತೇವೆ.

ನಾವು ಆತನ ನೊಗವನ್ನು ಹೊರುತ್ತಾ ಇಲ್ಲ. ಆದರೆ ಆತನ ಜೊತೆ ನೊಗವನ್ನು ಎಳೆಯುತ್ತಿದ್ದೇವೆ. ಯಾಕೆಂದರೆ ಆತನ ನೊಗವು ಮೃದುವಾಗಿದೆ ಮತ್ತು ಆತನ ಹೊರೆಯು ಹೌರವಾಗಿದೆ (ಮತ್ತಾಯ 11:30).

ಎರಡನೆ ಆಜ್ಞಾಪನೆ ಪದ 'ನನ್ನಿಂದ ಕಲಿತುಕೊಳ್ಳಿರಿ'. ಇದೇ ಪರಿಕಲ್ಪನೆಯನ್ನು ತಿರುಗಿ ಹೇಳುತ್ತದೆ. ಗ್ರೀಕ್ ಭಾಷೆಯಲ್ಲಿ ಕ್ರಿಯಪದವಾಗಿ 'ಕಲಿತುಕೊಳ್ಳಿರಿ' (ಕಲಿ) ಎಂಬುದು ಶಿಷ್ಯ ಎಂಬುದಕ್ಕೆ ಸೇರ್ಪಡುತ್ತದೆ. ನಾವು ಕ್ರಿಸ್ತನಲ್ಲಿ ಕಲಿತುಕೊಂಡರೆ ನಿಜವಾಗಿಯೂ ಆತನ ಶಿಷ್ಯರಾಗುತ್ತೇವೆ. ವಿಧೇಯತೆ ಮತ್ತು ಬದ್ಧತೆ ಶಿಷ್ಯತ್ವದ ಮುಖ್ಯ ಗುಣಲಕ್ಷಣವಾಗಿದೆ.

ಭಾರವನ್ನು ಹೊತ್ತಿರುವುದಕ್ಕೂ (ಮತ್ತಾಯ 11:28) ಆತನ ನೊಗವನ್ನು ಎತ್ತಿಕೊಳ್ಳುವುದಕ್ಕೂ ಏನು ವ್ಯತ್ಯಾಸ (ಮತ್ತಾಯ 11:29)

ನೊಗವು ಯೆಹೂದ್ಯಮತದಲ್ಲಿ ಧರ್ಮಶಾಸ್ತ್ರಕ್ಕೆ ಸಾಮಾನ್ಯವಾದ ರೂಪಕ ಪದವಾಗಿದೆ. ಅಪೋಸ್ತಲರ ಕೃತ್ಯ 15:10 ಸುನ್ನತಿಗೆ ಸಂಬಂಧಪಟ್ಟ ನಿಯಮಕ್ಕೆ ಉಲ್ಲೇಖಿಸಲಾಗಿದೆ. ಗಲಾತ್ಯ 5:1ರಲ್ಲಿ ದಾಸತ್ವದ ನೊಗಕ್ಕೆ ಬದಲಾಗಿ ಯೇಸುಕ್ರಿಸ್ತನು ಕೊಡುವ ಬಿಡುಗಡೆಗೆ ಬಳಸಲಾಗಿದೆ. ಇಲ್ಲಿ ಧರ್ಮಶಾಸ್ತ್ರದ ಮೂಲಕ ರಕ್ಷಣೆ ಎಂಬುದನ್ನು ಸೂಚಿಸುತ್ತದೆ. ಯೇಸುಕ್ರಿಸ್ತನ ಜೊತೆ ತಳಿಕೆ ಹಾಕಿಕೊಳ್ಳುವುದು ಆತನ ಸುವಾರ್ತೆ ಸೇವೆಯನ್ನು ಮಾಡುವುದಕ್ಕೆ ಆತನ ಹೆಜ್ಜೆ ಜಾಡನ್ನು ಬದ್ಧತೆಯಿಂದಲೂ ವಿಧೇಯತ್ವದಿಂದಲೂ ಅನುಸರಿಸಿ ನಡೆಯುವುದಕ್ಕೆ ಒತ್ತು ನೀಡುತ್ತದೆ. ಯೇಸುಕ್ರಿಸ್ತನು ಶಿಲುಬೆಯ ಮೇಲೆ ನಮಗಾಗಿ ಗೆದ್ದುಕೊಂಡ ರಕ್ಷಣೆಗೆ ನಮ್ಮದ್ಯಾವುದನ್ನು ಸೇರಿಸುವ ಪ್ರಯತ್ನ ಮಾಡದಿದ್ದರೆ ನಾವು ಆತನ ರಾಯಭಾರಿಗಳಾಗಿ ನಮ್ಮ ಸುತ್ತಲಿರುವ ಜನರಿಗೆ ಸುವಾರ್ತೆಯನ್ನು ಸಾರುವವರಾಗಿರುತ್ತೇವೆ. ಯೇಸುಕ್ರಿಸ್ತನು ಪರ್ವತ ಪ್ರಸಂಗದಲ್ಲಿ ಧರ್ಮಶಾಸ್ತ್ರದ ಬಗ್ಗೆ ಮಾಡಿರುವ ವ್ಯಾಖ್ಯಾನವು (ಮತ್ತಾಯ 5 ರಿಂದ 7 ಅಧ್ಯಾಯಗಳು) ಫರಿಸಾಯರು ಪರಿಗಣಿಸುವುದಕ್ಕಿಂತಲೂ ಕಟ್ಟುನಿಟ್ಟಾಗಿವೆ (ಧರ್ಮಶಾಸ್ತ್ರಕ್ಕೆ ನಿಷ್ಠವಾಗಿವೆ). ಇದು ಹೃದಯವನ್ನು ಶಸ್ತ್ರಚಿಕಿತ್ಸೆಗೆ ಒಳಪಡಿಸಿ ನಮ್ಮ ಉದ್ದೇಶಗಳನ್ನು ಮಾರ್ಪಡಿಸುತ್ತದೆ. ಆದುದರಿಂದ ಆತನ ನೊಗವು ಮೃದುವಾಗಿರುತ್ತದೆ ಮತ್ತು ಹೊರೆಯು ಹೌರವಾಗಿರುತ್ತದೆ (ಮತ್ತಾಯ 11:30).

ಎಂಥಾ ಅದ್ಭುತವಾದ ವಾಗ್ದಾನ! ನಮ್ಮ ಆತ್ಮಕ್ಕೆ ಅವಶ್ಯವಾದ ವಿಶ್ರಾಂತಿ. ನೀವು ಹೇಗೆ ವಿಶ್ರಾಂತಿಯನ್ನು ಅನುಭವಿಸಿರುವಿರಿ? ಅದು ಹೇಗಿರುತ್ತದೆ? ಯೇಸುಕ್ರಿಸ್ತನ ಮೇಲೆ ಆತನು ನಮಗೆ ಏನು ವಾಗ್ದಾನ ಮಾಡಿದ್ದಾನೋ ಅದರ ಮೇಲೆ ಗಮನ ಹರಿಸುವಾಗ ನಾವು ಹೇಗೆ ವಿಶ್ರಾಂತಿಯನ್ನು ಹೊಂದಲು ಆರಂಭಿಸುತ್ತೇವೆ?

**ಮಂಗಳವಾರ** **ಜುಲ 27**

## ನಾನು ಸಾತ್ವಿಕನೂ ದೀನ ಮನಸ್ಸುಳ್ಳವನೂ ಆಗಿದ್ದೇನೆ

ಸಾತ್ವಿಕಸ್ವಭಾವವನ್ನು ಜನರು ಇಂದು ಕೀಳಾಗಿ ಕಾಣುತ್ತಾರೆ. ದೀನರನ್ನು ಕಂಡರೆ ನಗುತ್ತಾರೆ. ಸಾಮಾಜಿಕ ಮಾಧ್ಯಮಗಳು ನಮಗೆ ಅಬ್ಬರ, ಗದ್ದಲ ಅಸಹಜ ಮತ್ತು ಕೃತ್ರಿಮವಾದ ವಿಷಯಗಳಿಗೆ ಆಕರ್ಷಿತವಾಗುವುದನ್ನು ಕಲಿಸಿಬಿಟ್ಟಿವೆ. ನಿಜವಾಗಿಯೂ ಬಹಳ ವಿಷಯಗಳಲ್ಲಿ ಲೋಕದ ಮಾನದಂಡವು ದೇವರು ಮುಖ್ಯವಾಗಿ ಪರಿಗಣಿಸುವ ಮೌಲ್ಯಗಳಿಗೆ ವಿರುದ್ಧವಾಗಿವೆ.

"ಸತ್ಯದ ಪರಿಜ್ಞಾನವು ಪರಿಶುದ್ಧತೆಯ ಉದ್ದೇಶದ ಮೇಲೆ ಆತುಕೊಂಡಿರುವಂತೆ ಬುದ್ಧಿವಂತರ ಬುದ್ಧಿಯನ್ನು ಆತುಕೊಂಡಿಲ್ಲ. ಯಾರು ಹೃದಯದಲ್ಲಿ ದೀನರಾಗಿ ದೈವಸಹಾಯವನ್ನು ಬಯಸುತ್ತಾರೋ ಅವರಿಗೆ ದೇವದೂತರು ಬಂದು ಸಹಾಯ ಮಾಡುತ್ತಾರೆ. ಅವರು ಸತ್ಯದ ಸಮೃದ್ಧವಾದ ಉಗ್ರಾಣವನ್ನು ತೆರೆಯುವಂತೆ ಅವರಿಗೆ ಪರಿಶುದ್ಧಾತ್ಮನು ಕೊಡಲ್ಪಡುತ್ತಾನೆ"– ಎಲೆನ್ ಜಿ ವೈಟಮ್ಮನವರ ಕ್ರೈಸ್ಟ್ಸ್ ಆಬ್ಜೆಕ್ಟ್ ಲೆಸೆನ್ಸ್, 59ನೇ ಪುಟ.

ಮತ್ತಾಯ 5:5 ಮತ್ತು 1 ಪೇತ್ರ 3:4, ಯೆಶಾಯ 57:15ನ್ನು ಓದಿರಿ. ನೀವು ಶಾಂತತೆ ಮತ್ತು ದೀನತೆಯು ಈ ವಚನಗಳ ಮೇಲೆ ಆಧಾರಗೊಂಡಿದೆ ಎಂದು ಹೇಗೆ ವಿವರಿಸುವಿರಿ?

2 ಕೊರಿಂಥ 10:1ನೇ ನನ್ನ ಪೌಲನು ಯೇಸುಕ್ರಿಸ್ತನ ಶಾಂತಮನಸ್ಸನ್ನೂ ಸಾತ್ವಿಕತ್ವವನ್ನೂ ಕುರಿತು ಹೇಳುತ್ತಾನೆ. ಶಾಂತತೆ ಮತ್ತು ದೀನತೆ ಎಂಬ ತಮ್ಮ ನೆಲೆಯ ಮೇಲೆ ನಿಲ್ಲಲಾರದೆ ಪ್ರಭಾವಕ್ಕೆ ಮಣಿಯುವ ಗುಣಸ್ವಭಾವವಲ್ಲ. ಸ್ವತಃ ಯೇಸುಕ್ರಿಸ್ತನು ತನ್ನ ಸುವಾರ್ತಾ ಸೇವೆ ನೆರವೇರಿಸುವತನಕ ವಿರೋಧಗಳನ್ನು ತಪ್ಪಿಸಿಕೊಳ್ಳುತ್ತಾ ಬಂದನು (ಯೋಹಾನ 4:1–3). ವಿರೋಧ ಬಂದಾಗಲೆಲ್ಲಾ ದಿಟ್ಟವಾಗಿ ಪ್ರತಿಕ್ರಿಯೆ ನೀಡಿದನು. ಆದರೂ ದಯಾಪೂರ್ವಕವಾಗಿ ಮಾತಾಡುತ್ತಿದ್ದನು.

ಆತನು ಶಿಲುಬೆಗೆ ಹಾಕಿಸಿಕೊಳ್ಳುವುದಕ್ಕೆ ಮುಂಚೆ ಯೆರೂಸಲೇಮಿನ ನಾಶಕ್ಕಾಗಿ ಮೌನವಾಗಿ ಕಂಬನಿಗರೆದನು (ಲೂಕ 19:41–44).

ಹೊಸ ಒಡಂಬಡಿಕೆಯಲ್ಲಿ ಯೇಸುಕ್ರಿಸ್ತನು ಬಹಳ ಸಲ ಎರಡನೇ ಮೋಶೆ ಎಂಬುದಾಗಿ ಬಣ್ಣಿಸಲ್ಪಟ್ಟಿದ್ದಾನೆ. ಆತನು ತನ್ನ ರಾಜ್ಯದ ನಿಯಮಗಳನ್ನು ಜನರ ಮುಂದೆ ಬಿಚ್ಚಿಡುವಾಗ ಗುಡ್ಡದ ಮೇಲಿಂದ ಮಾತಾಡಿದನು (ಪರ್ವತ ಪ್ರಸಂಗ ಮತ್ತಾಯ 5:1). ಆತನು ಅದ್ಭುತವಾಗಿ ಜನರ ದೊಡ್ಡಗುಂಪಿಗೆ ಆಹಾರ ಕೊಟ್ಟನು (ಮತ್ತಾಯ 14:13–21). ಅರಣ್ಯಕಾಂಡ 12:3ನೇ ವಚನವು ಮೋಶೆಯನ್ನು ಸಾತ್ವಿಕನು ಎಂದು ಹೇಳುತ್ತದೆ. ಅದು ಮತ್ತಾಯ 11:29ನೇ ವಚನದಲ್ಲಿ ಪ್ರತಿಧ್ವನಿಗೊಂಡಿದೆ. ಯೇಸುಕ್ರಿಸ್ತನು ಐದುಸಾವಿರ ಜನರಿಗೆ ಆಹಾರ ಕೊಟ್ಟಾಗ ಅಲ್ಲಿದ್ದ ಜನರು ಆಶ್ಚರ್ಯಪಟ್ಟು "ಈತನು ನಿಜವಾಗಿಯೂ ಲೋಕಕ್ಕೆ ಬರಬೇಕಾಗಿದ್ದ ಪ್ರವಾದಿಯು" ಎಂದು ಹೇಳಿದರು (ಯೋಹಾನ 6:14). ಇದು ಮೋಶೆಯ ಪಾತ್ರವನ್ನು ಕುರಿತು ಹೇಳುವ ಧ.ಕಾಂಡ 18:15ನೇ ವಚನ.

ಯೇಸುಕ್ರಿಸ್ತನ ದೀನತೆ ಮತ್ತು ಶಾಂತತೆ ನಿಚ್ಚಳವಾಗಿ ಮೋಶೆಯನ್ನು ಮೀರಿ ನಿಲ್ಲುತ್ತದೆ. ಹೌದಲ್ಲವೇ, ಆತನು ನಮ್ಮ ದೈವೀಕ ರಕ್ಷಕನು. ಒಂದು ವೇಳೆ ಮೋಶೆಯು ತನ್ನ ಜನರನ್ನು ರಕ್ಷಿಸಲು ಪ್ರಾಣ ತೆತ್ತಿದ್ದರೆ ಆತನ ಮರಣವು ಯಾವುದನ್ನೂ ಪೂರೈಸುತ್ತಿರಲಿಲ್ಲ (ವಿ.ಕಾಂಡ 32:32). ಯಾಕೆಂದರೆ ಮೋಶೆಯು ಒಬ್ಬ ಪಾಪಿಯಾಗಿ ರಕ್ಷಕನ ಅಗತ್ಯ ಅವನಿಗೂ ಇತ್ತು. ಹಾಗಾಗಿ ಪಾಪ ಹೊತ್ತವನು ಪಾಪಕ್ಕೆ ಪರಿಹಾರ ತೆರಲು ಸಾಧ್ಯವೇ. ನಾವು ಮೋಶೆ ಮತ್ತು ಆತನ ಜೀವನದ ಕಥೆಯಿಂದ ಕಲಿಯಬಹುದಾದರೂ ನಾವು ನಮ್ಮ ರಕ್ಷಣೆಯನ್ನು ಅವನಿಂದ ಕಂಡುಕೊಳ್ಳಲು ಸಾಧ್ಯವಿಲ್ಲ. ಆದರೆ ನಮ್ಮ ಜಾಗದಲ್ಲಿ ನಮ್ಮ ಬದಲಿಗೆ ನಿಲ್ಲುವ ರಕ್ಷಕನು ನಮಗೆ ಬೇಕಾಗಿದ್ದಾನೆ, ಕೇವಲ ಮಧ್ಯಸ್ಥನಾಗಿ ಮಾತ್ರವಲ್ಲ ನಮ್ಮ "ಬದಲಿಯಾಗಿ" ಬೇಕಾಗಿದ್ದಾನೆ. ಮಧ್ಯಸ್ಥನ ಮಧ್ಯಸ್ಥಿಕೆಯು ನಮಗೆ ಮುಖ್ಯವಾದರೂ ಶಿಲುಬೆಯಲ್ಲಿ ತೂಗಾಡಿದ ರಕ್ಷಕನು ತಾನೆ ನಮ್ಮ ಉಲ್ಲಂಘನೆಯ ನಿಮಿತ್ತ ನಾವು ತೆರಬೇಕಾದ ದಂಡವನ್ನು ತೆತ್ತು ನಮ್ಮನ್ನು ರಕ್ಷಿಸಿದ್ದಾನೆ. ಆದುದರಿಂದ ಯೇಸುಕ್ರಿಸ್ತನು ಎಷ್ಟೇ ದೊಡ್ಡ ಉದಾಹರಣೆಯಾಗಿರಬಹುದು, ಶಿಲುಬೆ ಮತ್ತು ಪುನರುತ್ಥಾನವಿಲ್ಲದೆ ಹೋದರೆ ಯಾವುದೂ ಏನೂ ಅಲ್ಲವಾಗಿ ಬಿಡುತ್ತದೆ.

**ಬುಧವಾರ** **ಜುಲೈ 28**

## ಯಾಕೆಂದರೆ ನನ್ನ ನೊಗವು ಮೃದುವಾದದ್ದು

ಮತ್ತಾಯನ ಸುವಾರ್ತೆಯಲ್ಲಿ 'ನೊಗ'ವೆಂಬುದನ್ನು ಈಗಾಗಲೇ ಗಮನಿಸಿದ್ದೇವೆ. ಇದು ಯೆಹೂದ್ಯ ಮತಕ್ಕೂ ಹೊಸಒಡಂಬಡಿಕೆಯಲ್ಲಿ ಧರ್ಮಶಾಸ್ತ್ರವನ್ನು ತಪ್ಪಾಗಿ ಅರ್ಥೈಸುವ ವಚನಗಳಿಗೂ ಉಪಯೋಗಿಸಲ್ಪಟ್ಟಿದೆ.

ಗ್ರೀಕ್ ಪದವಾದ ಸುಲಭ (ಮೃದು) ಎನ್ನುವುದನ್ನು ಒಳ್ಳೆಯ, ಹಿತಕರ, ಉಪಯುಕ್ತ, ಉಪಕಾರವೆಂತಲೂ ಅನುವಾದಿಸಬಹುದು. ನಮ್ಮ ಸುತ್ತಲಿರುವ ಅನೇಕ ಜನರು ದೇವರ ಆಜ್ಞೆಯನ್ನು ಬಿಗಿಯಾದ ಮುಷ್ಟಿ ಎಂದು ಪರಿಗಣಿಸುತ್ತಾರೆ. ಇದನ್ನು ಅನುಸರಿಸಿ ನಡೆಯುವುದು ಬಹಳ ಕಠಿಣ: ಬಹಳ ಸಂದರ್ಭದಲ್ಲಿ ಅಸಂಗತವಾಗಿದೆ (ಈ ಕಾಲಕ್ಕೆ ಹೊಂದಲಾರದ್ದು) ಎಂದು ಅಭಿಪ್ರಾಯ ಪಡುತ್ತಾರೆ. ಇಂಥ ಜನರಿಗೆ ಆಜ್ಞೆಯ ಸೌಂದರ್ಯವನ್ನು ಆಜ್ಞೆಯನ್ನು ಕೊಟ್ಟ ದೇವರ ಮೇಲೆ ಪ್ರೀತಿಯನ್ನು ಉತ್ತೇಜಿಸುವುದಕ್ಕೆ ಹೇಗೆ ಸಹಾಯ ಮಾಡಬಹುದು?

ತಂದೆ ತಾಯಿಗಳು ತಮ್ಮ ಮಗುವು ಮೊದಲ ಹೆಜ್ಜೆ ಇಟ್ಟ ಸಂದರ್ಭವನ್ನು ಯಾವಾಗಲೂ ನೆನಪು ಮಾಡಿಕೊಳ್ಳುತ್ತಾರೆ. ತೂರಾಡುತ್ತಾ ಕಷ್ಟ ಪಡುತ್ತಾ ಒಂದು ಹೆಜ್ಜೆಯನ್ನು ಇಟ್ಟು ಬಳಿಕ ಮುಂದಿನ ಹೆಜ್ಜೆಯನ್ನು ಪ್ರಯತ್ನ ಪಟ್ಟು ಇಡುತ್ತದೆ, ನಂತರ ಮೂರನೆಯ ಹೆಜ್ಜೆ ಈವಾಗ ಮಗುವು ಎಡವುತ್ತದೆ ಕೆಳಗೆ ಬೀಳುತ್ತದೆ. ಆವಾಗ ಅದರ ಕಣ್ಣಲ್ಲಿ ನೀರು ಬರುತ್ತದೆ, ಬಹುಶಃ ಅದಕ್ಕೆ ಸಣ್ಣಪುಟ್ಟ ಗಾಯಗಳೂ ಆಗಿರುತ್ತವೆ. ಇದು ಹೀಗೆಯೇ ಬಹಳ ಸಲ ಪುನರಾವರ್ತನೆಯಾಗಿ ಕಡೆಗೆ ದೃಢವಾಗಿ ನಡೆಯಲು ಕಲಿತಿರುತ್ತದೆ. ಆದಾಗ್ಯೂ ಏಳು ಬೀಳು ಎಡುವುಗಳ ನಡುವೆ ನಡೆಯುವಾಗ ಜಂಭದಿಂದ ಅಪ್ಪಾ ಅಮ್ಮಾ ನಾನು ನಡೆಯುತ್ತಿದ್ದೇನೆ ಎಂದು ಮುಖದಲ್ಲಿ ಗೆದ್ದ ಭಾವವನ್ನು ಸೂಚಿಸುತ್ತದೆ.

ಯೇಸುಕ್ರಿಸ್ತನ ಜೊತೆ ನಡೆಯುವುದು ಯಾವಾಗಲೂ ಸುಲಭವಲ್ಲ, ಆದರೆ ಅವನ ಜೊತೆ ನಡೆಯುವುದು ಯಾವಾಗಲೂ ಒಳ್ಳೆಯದು ಮತ್ತು ಸರಿಯಾದದು. ನಾವು ಎಡವಬಹುದು; ಬಿದ್ದು ಬಿಡಬಹುದು; ಆದಾಗ್ಯೂ ನಾವು ಎದ್ದು ಅವನೊಂದಿಗೆ ನಡೆಯುವುದನ್ನು ಮುಂದುವರೆಸಬಹುದು.

ಗಲಾತ್ಯ 5:1ರಲ್ಲಿ ಪೌಲನು : "ಕ್ರಿಸ್ತನು ನಮ್ಮನ್ನು ಸ್ವತಂತ್ರ್ಯದಲ್ಲಿರಬೇಕೆಂದು ನಮಗೆ ಬಿಡುಗಡೆ ಮಾಡಿದನು. ಅದರಲ್ಲಿ ಸ್ಥಿರವಾಗಿ ನಿಲ್ಲಿರಿ; ದಾಸತ್ವದ ನೊಗದಲ್ಲಿ

ತಿರುಗಿ ಸಿಕ್ಕಿಹಾಕಿಕೊಳ್ಳಬೇಡಿರಿ" ಎಂದು ಹೇಳುತ್ತಾನೆ. ಇದರ ಅರ್ಥವೇನು? ಯೇಸುಕ್ರಿಸ್ತನು ನಮ್ಮನ್ನು ಹೇಗೆ ಸ್ವತಂತ್ರಗೊಳಿಸಿದ್ದಾನೆ? ಯೇಸುಕ್ರಿಸ್ತನು ಹೊತ್ತುಕೊಳ್ಳಬೇಕೆಂದು ಹೇಳುವ ನೊಗಕ್ಕೂ ಪೌಲನು ದಾಸತ್ವದ ನೊಗಕ್ಕೂ ಏನು ವ್ಯತ್ಯಾಸ?

ಪೌಲನು ದಾಸತ್ವದ ನೊಗವೆಂದು ದೇವರ ಆಜ್ಞೆಗಳಿಗೆ ತೋರುವ ವಿಧೇಯತೆಯನ್ನು ಕುರಿತು ಹೇಳುತ್ತಿಲ್ಲ. ನಾವು ನಂಬಿಕೆಯಿಂದ ವಿಧೇಯರಾಗು–ವುದರಿಂದ ನಮಗೆ ರಕ್ಷಣೆಯಾಗುತ್ತದೆ, ಧರ್ಮಶಾಸ್ತ್ರವು ನಮ್ಮನ್ನು ಬಿಡಿಸುವುದಿಲ್ಲ. ಯೇಸುಕ್ರಿಸ್ತನ ನೀತಿಯು ನಮ್ಮ ಪಾಪಗಳನ್ನು ಮುಚ್ಚಿಹಾಕುತ್ತದೆ. ಆತನಲ್ಲಿ ನಾವು ನಿಜವಾದ ವಿಶ್ರಾಂತಿಯನ್ನು ಬಿಡುಗಡೆಯನ್ನು ಹೊಂದಿಕೊಳ್ಳುತ್ತೇವೆ.

ದೇವರ ಆಜ್ಞೆಗಳನ್ನು ಮೀರಿ ನಡೆಯುವಾಗ ಸಿಗುವ ವಿಶ್ರಾಂತಿಗಿಂತ ಅದಕ್ಕೆ ವಿಧೇಯರಾಗಿ ಜೀವನ ನಡೆಸುವಾಗ ಹೆಚ್ಚು ವಿಶ್ರಾಂತಿ ಸಿಗುತ್ತ ಏಕೆ?

**ಗುರುವಾರ** **ಜುಲೈ 29**

## ನನ್ನ ಹೊರೆಯು ಹೌರವಾದದ್ದು

ಮತ್ತಾಯ 11:30ನೇ ವಚನದಲ್ಲಿ ಯೇಸುಕ್ರಿಸ್ತನು ಅಂತಿಮ ಹೇಳಿಕೆಯು "ನನ್ನ ನೊಗವು ಮೃದುವಾದದ್ದು; ನನ್ನ ಹೊರೆಯು ಹೌರವಾದದ್ದು" ಎಂಬುದಾಗಿ ಹೊರೆಹೊರುವ ಪರಿಕಲ್ಪನೆಯನ್ನು ಉಪಯೋಗಿಸಿದೆ.

ಇಸ್ರಾಯೇಲ್ಯರು ಐಗುಪ್ತವನ್ನು ಬಿಟ್ಟು ಸಮುದ್ರದಾಟಿ ಬಂದಾಗ ಮೋಶೆಯು ತನ್ನ ಮಾವನಾದ ಯೆತ್ರೋವನ್ನು ನೋಡಿ ಸಂತೋಷಪಡುತ್ತಾನೆ. ವಿ.ಕಾಂಡ 18:13–22 ವಚನಗಳನ್ನು ಓದಿರಿ. ಒಬ್ಬ ವ್ಯಕ್ತಿಯು ಮತ್ತೊಬ್ಬನ ಹೊರೆಯನ್ನು ಹೊತ್ತುಕೊಳ್ಳುವುದು ಈ ಕಥೆಯಲ್ಲಿ ಹೇಗೆ ಕಾಣುತ್ತದೆ?

ವಿ.ಕಾಂಡ 18:13ರಲ್ಲಿ ಜನರು ಬೆಳಗಿನಿಂದ ಸಂಜೆಯವರೆಗೂ ನ್ಯಾಯಕ್ಕಾಗಿ ಮೋಶೆಯ ಹತ್ತಿರಕ್ಕೆ ತಮ್ಮ ವ್ಯಾಜ್ಯಗಳನ್ನು ತೆಗೆದುಕೊಂಡು ಬರುತ್ತಿದ್ದರು. ಇದನ್ನು ನೋಡಿದ ಮೋಶೆಯ ಮಾವನು ಆತನಿಗೆ ಒಂದು ವ್ಯವಸ್ಥೆಯನ್ನು ಮಾಡಿಕೊಂಡು ದೊಡ್ಡ ದೊಡ್ಡ ವ್ಯಾಜ್ಯಗಳನ್ನು ಮಾತ್ರ ತೆಗೆದುಕೊಂಡು ಸಾಮಾನ್ಯವಾದುವುಗಳನ್ನು ನಡೆಸಲು ಜನರನ್ನು ನೇಮಿಸಿಕೊಳ್ಳಬೇಕು ಎಂದು ಸಲಹೆಕೊಡುತ್ತಾನೆ. ಮೋಶೆಯು

ಯೆತ್ರೋವಿನ ಮಾತಿನಂತೆ ಜನರನ್ನು ನೇಮಿಸಿಕೊಂಡು ಜೀವನಕ್ಕೆ ಸುಲಭವಾಗುವ ಹಾಗೆ ಅನುಷ್ಠಾನಕ್ಕೆ ತಂದನು ಎಂಬುದಾಗಿ ವಾಕ್ಯದಲ್ಲಿ ಓದುತ್ತೇವೆ.

ಯೇಸುಕ್ರಿಸ್ತನು ತನ್ನ ಹೊರೆಯು ಹೌರವಾದದ್ದು ಎಂದು ಹೇಳುವಾಗ ತಾನೇ ಅದನ್ನು ಹೊರುವವನಾಗಿ ತನ್ನ ಮೇಲೆ ಭರವಸವಿಡಬೇಕು ಎಂಬುದನ್ನು ನೆನಪು ಮಾಡುತ್ತಾನೆ. ಮೋಶೆಯಂತೆ ನಾವು ನಮ್ಮ ಜವಾಬ್ದಾರಿಗಳನ್ನು ಮತ್ತೊಬ್ಬರಿಗೆ ಹಂಚಿಕೊಡಬೇಕು. 1 ಕೊರಿಂಥ 12:12–26ರಲ್ಲಿ ಪೌಲನು ದೇಹದ ಪರಿಕಲ್ಪನೆಯಿಂದ ಜವಾಬ್ದಾರಿಯನ್ನು ಹಂಚಿಕೊಳ್ಳುವುದು ಹೇಗಿರುತ್ತದೆ ಎಂಬ ನಿದರ್ಶನವನ್ನು ನೀಡುತ್ತಾನೆ. ನಮಗೆ ಕಾರ್ಯನಿರ್ವಹಿಸುವ ದೇಹವಿದ್ದರೆ ಹೊರೆಯನ್ನು ಹೊತ್ತುಕೊಂಡು ಸಾಗಬಹುದು. ನಾವು ಭಾರಹೊರುವಾಗ ನಮ್ಮ ಕಾಲುಗಳು, ಕೈಗಳು, ತೋಳುಗಳು, ಹೆಗಲುಗಳು, ಮಾಂಸಖಂಡ ನರಗಳು ಸ್ನಾಯುಗಳು ಎಲ್ಲವೂ ಕೆಲಸ ಮಾಡುತ್ತವೆ.

ಗಲಾತ್ಯ 6:2ನೇ ವಾಕ್ಯವನ್ನು ಓದಿರಿ. ಒಬ್ಬರು ಮತ್ತೊಬ್ಬರ ಭಾರವನ್ನು ಹೊತ್ತುಕೊಂಡಾಗ ಕ್ರಿಸ್ತನ ನಿಯಮವನ್ನು ಹೇಗೆ ಪೂರೈಸುತ್ತದೆ?

ಈ ವಾಕ್ಯದ ಹಿಂದಿರುವ ಸಂದರ್ಭವು ನಮಗೆ ಸಹಾಯವನ್ನು ಒದಗಿಸುತ್ತದೆ. ಗಲಾತ್ಯ 6:1ರಲ್ಲಿ ಪೌಲನು "ಸಹೋದರರರೇ, ನಿಮ್ಮಲ್ಲಿ ಯಾರಾದರೂ ಯಾವುದೋ ಒಂದು ದೋಷದಲ್ಲಿ ಸಿಕ್ಕಿದರೆ. ಅಂಥವನನ್ನು ಆತ್ಮನಿಂದ ನಡೆಸಿಕೊಳ್ಳುವ ನೀವು ಶಾಂತಭಾವದಿಂದ ತಿದ್ದಿ ಸರಿಮಾಡಲಿ" ಎಂದು ಹೇಳುತ್ತಾನೆ (ಮತ್ತಾಯ 11:29ರಲ್ಲಿ ತಾನು ಸಾತ್ವಿಕನು, ದೀನ ಮನಸ್ಸುಳ್ಳವನು ಎಂದು ಹೇಳುವುದನ್ನು ನೆನಪಿಸಿಕೊಳ್ಳಿರಿ). ಮತ್ತೊಬ್ಬರ ಹೊರೆ ಹೊರುವುದು ಎಂದರೆ ಯಾರಾದರೂ ಮಾರ್ಗತಪ್ಪಿಹೋದಾಗ ಆ ವ್ಯಕ್ತಿಯು ಮತ್ತೆ ದೈವಕೃಪೆಯನ್ನು ಕಂಡುಕೊಳ್ಳುವ ಹಾಗೆ ಅವನನ್ನು ಕ್ರಿಸ್ತನ ಬಳಿಗೆ ಕರೆದುಕೊಂಡು ಬರುವುದೇ ಆಗಿದೆ ಮತ್ತು ಕಷ್ಟದಲ್ಲಿ ಬಿದ್ದಿರುವ ಸಹೋದರರಿಗೆ ಸಹಾಯ ಮಾಡುವುದಕ್ಕೂ ಅನ್ವಯವಾಗುತ್ತದೆ. 'ಹೊರೆ' ಎಂಬ ಪದಕ್ಕೆ ಗ್ರೀಕ್ ಭಾಷೆಯಲ್ಲಿ ದೊಡ್ಡ ಭಾರ ಅಥವಾ ಕಲ್ಲು ಎಂಬ ಅರ್ಥಗಳಿವೆ. ನಾವೆಲ್ಲರೂ ನಮ್ಮ ಹೊರೆಗಳನ್ನು ಹೊತ್ತುಕೊಂಡು ಹೋಗಲೇಬೇಕು. ಆದುದರಿಂದ ನಮ್ಮ ಹೊರೆಯನ್ನು ಹೊರುವ ಮತ್ತೊಬ್ಬರು ನಮಗೆ ಮುಂದೆ ಹೋಗುವುದಕ್ಕೆ ಸಹಾಯ ಮಾಡುತ್ತಾರೆ. ಕಷ್ಟಗಳನ್ನು ಹಂಚಿಕೊಳ್ಳುವುದು ಸಭೆಗೆ ಒಂದು ದೈವನಿಯಮಿತ

ಕೆಲಸವಾಗಿದ್ದು ಅದಕ್ಕೆ ಸಾತ್ವಿಕತೆಯು ಮತ್ತು ಅನುಕಂಪವು ಬೇಕಾಗುತ್ತದೆ.

ಕಳೆದ ಸಲ ನೀವು ನಿಮ್ಮ ಹೊರೆಯನ್ನು ಹೊತ್ತುಕೊಂಡು ಕಷ್ಟಪಡುವಾಗ ಮತ್ತೊಬ್ಬರು ಸಹಾಯ ಮಾಡಿದ್ದನ್ನು ಆಲೋಚಿಸಿರಿ, ಅದು ನಿಮಗೆ ಬಹಳ ಅರ್ಥವನ್ನು ನೀಡುತ್ತದೆ ಹೇಗೆ? ಈವಾಗ ನೀವು ಯಾರ ಹೊರೆಯನ್ನು ಹೊರಲು ಸಹಾಯ ಮಾಡುತ್ತಿರುವಿರಿ?

**ಶುಕ್ರವಾರ** **ಜುಲೈ 30**

**ಹೆಚ್ಚಿನ ಚಿಂತನೆ :** ನಿಮಗೆ ನಿಮ್ಮ ಕೆಲಸ ಕಷ್ಟವೆನಿಸಿದಾಗ, ನೀವು ಕಷ್ಟ ಮತ್ತು ಶೋಧನೆಗಳ ದೂರನ್ನು ಹೇಳುವಾಗ, ನಮಗೆ ಶೋಧನೆಯನ್ನು ಗೆಲ್ಲುವುದಕ್ಕಾಗುವುದಿಲ್ಲ ಎಂದು ಹೇಳುವಾಗ, ನೀವು ಸಹನೆಯನ್ನು ಕಳೆದು ಕೊಂಡವರಾಗಿ ನಿಮ್ಮ ಕ್ರೈಸ್ತೀಯ ಜೀವಿತವು ಕಷ್ಟವಾಗಿ ಬಿಡುತ್ತದೆ. ಆವಾಗ ಒಂದು ವಿಷಯ ಖಂಡಿತವಾದದು ಅದೇನೆಂದರೆ ನೀವು ಯೇಸುಕ್ರಿಸ್ತನ ನೊಗವನ್ನು ಹೊರುತ್ತಿರದೆ ಮತ್ತೊಬ್ಬ ಯಜಮಾನನ ಹೊರೆಯನ್ನು ಹೊತ್ತುಕೊಂಡಿರುತ್ತೀರಿ. ಎಲೆನ್ ಜಿ ವೈಟಮ್ಮನವರ ಚೈಲ್ಡ್ ಗೈಡೆನ್ಸ್, ಪುಟ 27.

"ನಮಗೆ ಸ್ಥಿರವಾದ ಜಾಗ್ರತೆ, ಶ್ರದ್ಧೆ ಮತ್ತು ಪ್ರೀತಿಪೂರ್ವಕವಾದ ಸಮರ್ಪಣೆ ಇರಬೇಕು, ಆದರೆ ಇವುಗಳು ನಾವು ನಮ್ಮ ಆತ್ಮವನ್ನು ದೇವರ ಶಕ್ತಿಯಿಂದ ನಂಬಿಕೆಯಲ್ಲಿ ಇಟ್ಟುಕೊಂಡಾಗ ಸಹಜವಾಗಿ ನಮಗೆ ಬರುತ್ತವೆ. ನಾವು ನಮ್ಮ ದೇವರಿಗೆ ಮೆಚ್ಚಿಗೆಯಾಗುವಂತೆ ನಾವು ಏನನ್ನೂ ಮಾಡಲಾರೆವು ಸಂಪೂರ್ಣವಾಗಿ ಏನನ್ನೂ ಮಾಡಲಾರೆವು. ನಾವು ಎಂದೆಂದಿಗೂ ನಮ್ಮ ಮೇಲಾಗುವ ನಮ್ಮ ಒಳ್ಳೆಯ ಕ್ರಿಯೆಗಳ ಮೇಲಾಗಲಿ ಭರವಸೆಯಿಡಬಾರದು. ಯಾವಾಗಲೂ ತಪ್ಪು ಮಾಡುವ ಪಾಪಸ್ವರೂಪರಾದ ನಾವು ಕ್ರಿಸ್ತನ ಬಳಿಗೆ ಬಂದರೆ ಆತನ ಪ್ರೀತಿಯಲ್ಲಿ ನಾವು ವಿಶ್ರಾಂತಿಯನ್ನು ಕಂಡುಕೊಳ್ಳಬಹುದು.

ನಮಗಾಗಿ ಶಿಲುಬೆಯೇರಿದ ರಕ್ಷಕನ ಅರ್ಹತೆಗಳ ಮೇಲೆ ಸಂಪೂರ್ಣವಾದ ಭರವಸೆಯಿಡುವವರನ್ನು ದೇವರು ಅಂಗೀಕಾರ ಮಾಡಿಕೊಳ್ಳುತ್ತಾನೆ. ಪ್ರೀತಿಯು ಹೃದಯದಲ್ಲಿ ಉಕ್ಕುತ್ತದೆ. ಆವಾಗ ನೀವು ಆನಂದಪರವಶರಾದ ಅನುಭವ–ವಾಗುತ್ತದೆ. ಆದರೆ ನಿಶ್ಚಲವಾದ ಶಾಂತವಾದ ಭರವಸೆಯಿರುತ್ತದೆ. ಎಲ್ಲಾ ಹೊರೆಗಳು ಹಗುರವಾಗುತ್ತವೆ; ಯಾಕೆಂದರೆ ಕ್ರಿಸ್ತನು ನಿಮ್ಮ ಮೇಲೆ ಹೊರಿಸಿರುವುದು

ಮೃದುವಾದದ್ದು. ಕೆಲಸ ಮಾಡುವುದು ಸಂತೋಷದಾಯಕವಾಗಿರುತ್ತದೆ, ತ್ಯಾಗವು ಸುಖಕರವಾಗಿರುತ್ತದೆ. ಕತ್ತಲೆಯಿಂದ ಆವರಿಸಿಕೊಂಡಿದ್ದ ಮಾರ್ಗವು ನೀತಿ ಸೂರ್ಯನ ಕಿರಣಗಳಿಂದ ಬೆಳಗುತ್ತದೆ. ಬೆಳಕಿನಲ್ಲಿ ನಡೆಯುವುದು ಎಂದರೆ ಹೀಗೆ ಕ್ರಿಸ್ತನು ಬೆಳಕಿನಲ್ಲಿ ಇರುವಂತೆ" – ಎಲೆನ್ ಜಿ ವೈಟಮ್ಮನವರ Faith and Works ಪುಟ 38, 39.

## ಚರ್ಚಿಸಬೇಕಾದ ಪ್ರಶ್ನೆಗಳು

1. ನೀವು ಅಂತಿಮವಾಗಿ ನಿಮ್ಮನ್ನು ಕ್ರಿಸ್ತನಿಗೆ ಒಪ್ಪಿಸಿಕೊಟ್ಟ ಸಂದರ್ಭವನ್ನು ನೆನಪಿನಲ್ಲಿಟ್ಟುಕೊಂಡಿರುವಿರಾ? ಈ ಸಂದರ್ಭವನ್ನು ನಿಮ್ಮ ತರಗತಿಯಲ್ಲಿ ಹಂಚಿಕೊಳ್ಳಿರಿ. ವಿಶೇಷವಾಗಿ ಒಪ್ಪಿಸಿಕೊಟ್ಟ ಕಾರಣವನ್ನು ಹಂಚಿಕೊಳ್ಳಿರಿ.

2. ಮತ್ತಾಯ 11:25–27ರಲ್ಲಿರುವ ಪ್ರಾರ್ಥನೆಯನ್ನು ಅಧ್ಯಯನ ಮಾಡಿರಿ ಮತ್ತು ನಾವು ಕೃಪೆಯ ಜ್ಞಾನವನ್ನು ಹೇಗೆ ಹೊಂದಬಹುದೆಂದು ತರಗತಿಯಲ್ಲಿ ಚರ್ಚಿಸಿರಿ. ದೇವರು ಯಾಕೆ ಜ್ಞಾನಿಗಳಿಗೂ ಬುದ್ಧಿವಂತರಿಗೂ ತನ್ನ ರಕ್ಷಣೆಯ ಯೋಜನೆಯನ್ನು ಮರೆಮಾಡಿ ಬಾಲಕರಿಗೆ ಪ್ರಕಟಮಾಡಿದನು?

3. ನಮ್ಮ ಸುತ್ತಲೂ ಇರುವ ಜನರು ಹೊರೆ ಹೊತ್ತವರಾಗಿ ಯೇಸುಕ್ರಿಸ್ತನ ಹತ್ತಿರ ಬಂದು ವಿಶ್ರಾಂತಿಯನ್ನು ಹೊಂದಿಕೊಳ್ಳುವ ಹಾಗೆ ನಿಜ ಜೀವಿತದಲ್ಲಿ ಹೇಗೆ ಸಹಾಯ ಮಾಡಬಹುದು?

4. "ನಾನು ಸಾತ್ವಿಕನೂ ದೀನ ಮನಸ್ಸುಳ್ಳವನೂ ಆಗಿದ್ದೇನೆ" ಎಂಬ ಆಲೋಚನೆಯ ಬಗ್ಗೆ ಹೆಚ್ಚು ಧ್ಯಾನಿಸೋಣ. ನಾವು ಯಾವಾಗಲೂ ನಮ್ಮನ್ನು ತಗ್ಗಿಸಿಕೊಂಡು ದೀನರಾಗಿರಬೇಕೇ, ಸ್ವಗೌರವವು ವ್ಯಕ್ತಿಗೆ ಅಷ್ಟು ಕೆಟ್ಟದ್ದೆ? ಜನರು ಬಗ್ಗೆ ಸಂಶಯಪಟ್ಟುಕೊಂಡು ಕಷ್ಟಪಡುತ್ತಿರುವಾಗ ತಮ್ಮ ಬಗ್ಗೆ ತಾವು ಒಳ್ಳೆಯ ಭಾವನೆ ಇಟ್ಟುಕೊಳ್ಳಬಾರದೆ? ಹೇಗೆ ಶಿಲುಬೆ ಮತ್ತು ಶಿಲುಬೆಯು ಪ್ರತಿನಿಧಿಸುವಂಥದ್ದು ಯೇಸು ಎಂದರೆ ಸಾತ್ವಿಕತೆ ಮತ್ತು ದೀನಮನಸ್ಸು ಎಂಬುದಾಗಿ ಅರ್ಥಮಾಡಿಕೊಳ್ಳಲು ಸಹಾಯ ಮಾಡುತ್ತದೆ. ಶಿಲುಬೆಯ ಸಮ್ಮುಖದಲ್ಲಿ ಸಾತ್ವಿಕತೆ ಮತ್ತು ದೀನ ಮನಸ್ಸು ಮಾತ್ರ ನಿಜವಾದ, ಸರಿಯಾದ ಮನೋಭಾವನೆಯಾಗಿರುತ್ತದೆ ಯಾಕೆ?